doc-518
T.P-2

Reg No B C 155 28—7—72

55th Year of Publication : 'Satyavadi' daily, Mysore 4

In the State - The First
Golden Jubilee
Celebrated Paper
★
News, Views, Dharmic
Moral Ethical Matters



ರಾಜ್ಯಹಲ್ಲಿ ಪ್ರಥಮ
ಸ್ವರ್ಣ ಜಯಂತಿ
ಮಹೋತ್ಸವ
ಸಂದರ್ಭದಲ್ಲಿ ಪ್ರಕಟಿಸಿದ
ಪತ್ರಿಕೆ

ಸ್ಥಾಪಕರು: ಅರಮನೆ ಏರಸ್ತ್ರೀದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಚಳುವಳಿ ಹೂಡುವುದಾಗಿ ಪೂರಿ ಜಗದ್ಗುರುಗಳ ಬೆದರಿಕೆ

ಜಗದ್ಗುರುಗಳಿಂದ ಚಳವಳಿ ಬೆದ್ದರಿಕೆ

ಹೈದರಾಬಾದು— ಹೈದರಾಬಾದಿನಲ್ಲಿ ಭಾರಿ ಪ್ರಮಾಣದ ನಧಾಗೃಹವನ್ನು ನಿರ್ಮಿಸುವ ಯೋಜನೆಯನ್ನು ಸರಕಾರ ಮುಂದುವರಿಸಿದರೆ, ಅದರ ವಿರುದ್ಧ ಭೀಕರ ಚಳವಳಿ ಹೂಡುವದಾಗಿ ಪೂರಿ ಜಗದ್ಗುರುಗಳು ಬೆದರಿಕೆ ಹಾಕಿದ್ದಾರೆ.

ವಿಭಾಗಾಧಿಕಾರಿಗಳ ಆಜ್ಞೆಗೆ ಪ್ರತಿಭಟನೆ

ತರೀಕೆರೆ— ತಾಲ್ಲೂಕು ಕಚೇರಿ ಮೈದಾನದಲ್ಲಿ ಸಭೆಗಳನ್ನೂ ಸಮಾರಂಭಗಳನ್ನೂ ನಡೆಸುವದನ್ನು ವಿಭಾಗಾಧಿಕಾರಿಗಳು ಪ್ರತಿಬಂಧಿಸಿರುವದರ ಬಗ್ಗೆ ಟೌನ್‌ಹಾಲ್‌ನಲ್ಲಿ ವಿದ್ಯಾರ್ಥಿಗಳು ಮತ್ತು ಸಾರ್ವಜನಿಕ ನಾಯಕರ ಭಾರಿ ಸಭೆ ನಡೆಯಿತು — ಈ ಆಜ್ಞೆಯನ್ನು ಪ್ರತಿಭಟಿಸಲು, ಮತ್ತು ಏನೇ ಸಂಭವಿಸಿದರೂ ಆಗಸ್ಟ್ 14-15 ರಾತ್ರಿ ಸ್ವಾತಂತ್ರ್ಯ ದಿನದ ರಜತೋತ್ಸವನ್ನು ಅಲ್ಲೇ ನಡೆಸಲು ನಿರ್ಣಯಿಸಲಾಯಿತು.

★

ಹುಡುಗಿಯರನ್ನು ಪೀಡಿಸಿದ್ದಕ್ಕೆ

ಬೆಂಗಳೂರು— ಅಪ್ಪಜ್ರೆ ರಸ್ತೆಯಲ್ಲಿ ಟೈಪ್‌ರೈಟಿಂಗ್ ಇನ್‌ಸ್ಟಿಟ್ಯೂಟಿಗೆ ಹೋಗುತ್ತಿದ್ದ ಹುಡುಗಿಯರನ್ನು ಪೀಡಿಸಿದ ಕಬ್ಬನಪೇಟೆಯ 22 ವರ್ಷದ ಒಬ್ಬನಿಗೆ ರೂ 100 ದಂಡ ವಿಧಿಸಲಾಯಿತೆಂದು ಪೋಲೀಸ್ ಕಮಿಷನರ್ ಶ್ರೀ ಕೆ. ಜಿ ರಾವು ಣ್ಣನವರು ಪತ್ರಿಕೆಯವರಿಗೆ ತಿಳಿಸಿದರು.

★

ಸಾಹಸ ಕಾರ್ಯ

ಲಂಡನ್— ಪ್ರತಿ ಐದು ವಾಕ್ಯಗಳಿಗೆ ಒಂದೊಂದು ಜಲಾಂತರ್ಗಾಮಿಯನ್ನು ರಷ್ಯಾ ನಿರ್ಮಿಸುತ್ತಿದೆಯೆಂದು 'ಜೇನ್ಸ್ ಫೈಟರ್ ಷಿಪ್ಸ್' ಪ್ರಕಟಿಸಿದೆ.

ಮುಖ್ಯಮಂತ್ರಿಗಳಿಗೆ ಅದ್ದೂರಿ ಸ್ವಾಗತ

ಮೈಸೂರು— ಮುಖ್ಯ ಮಂತ್ರಿ ಶ್ರೀ ದೇವರಾಜಅರಸ್‌ರವರು ತಾ || 30 ರಂದು ನಗರಕ್ಕೆ ಬಂದಾಗ ಕನ್ನಡಿಗರ ಮಹದಾಶೆಯಾಗಿದ್ದ ರಾಜ್ಯದ ಹೆಸರು "ಕರ್ನಾಟಕ" ವೆಂದು ಪುನರ್ನಾಮಕರಣ ಮಾಡಿದ ಸಂತೋಷಕ್ಕಾಗಿ, ಅವರಿಗೆ ರಾಜೇಂದ್ರ ಸರ್ಕಲ್‌ನಲ್ಲಿ ಅದ್ದೂರಿ ಸ್ವಾಗತ ನೀಡಲು ಕನ್ನಡ ಚಳವಳಿಗಾರರು ನಿರ್ಧರಿಸಿರುವರು.

ಲಾಟರಿಯಿಂದಾಗಿರುವ ಲಾಭ

ಬೆಂಗಳೂರು— ಲಾಟರಿ ಪ್ರಾರಂಭಿಸಿದಂದಿನಿಂದ ಸರಕಾರಕ್ಕೆ ರೂ 5.51 ಕೋಟಿ ನಿವ್ವಳ ಸಫ್ಲ ಹೊತೆತಿರುವನೆಂದು ಅರ್ಥ ಮಂತ್ರಿ ಶ್ರೀ ಫೋಸ್ಡಿ ವಿಧಾನ ಪರಿಷತ್ತಿನಲ್ಲಿ ತಿಳಿಸಿದರು.

★

ಸರಕಾರಕ್ಕೆ ಅಭಿನಂದನೆ

ಮೈಸೂರು — ಚೇತನ ಕನ್ನಡ ಸಂಘದವರು, ಸರಕಾರವು ರಾಜ್ಯದ ಹೆಸರನ್ನು 'ಕರ್ನಾಟಕ" ವೆಂದು ಪುನರ್ನಾಮಕರಣ ಮಾಡಿದ್ದಕ್ಕೆ ಅಭಿನಂದಿಸಿರುವರು — ಕನ್ನಡವನ್ನು ನವೆಂಬರು 1 ರಿಂದ ಅಧಿಕೃತ ಭಾಷೆಯನ್ನಾಗಿ ಮಾಡಲೂ, ಉರ್ದು ಸ್ಕೂಲುಗಳಲ್ಲಿ ಕನ್ನಡವನ್ನು ಕಡ್ಡಾಯ ಮಾಡಲೂ ಸರ್ಕಾರವನ್ನು ಒತ್ತಾಯ ಮಾಡಿರುವರು.

★

ಪರಿಭಾವನೆ ತೆಗೆಯಲಾಗುವುದು

ನವದೆಹಲಿ— ಐ ಎ ಎಸ್ ಮತ್ತು ಐ ಪಿ ಎಸ್ ಗೆ ಹೊಸಬರನ್ನು ತೆಗೆದುಕೊಳ್ಳುವದರಲ್ಲಿ ವಿವಾಹಿತ ಮಹಿಳೆಯರ ಬಗ್ಗೆ ಇರುವ ಪರಿಭಾವನೆಯನ್ನು ತೆಗೆದುಹಾಕಲಾಗುವದೆಂದು ಹೇಳಲಾಗಿದೆ.

ಬ್ರಿಟನ್ನಿನಲ್ಲಿ ಬಿಕ್ಕಟ್ಟು

ಲಂಡನ್— ಬಂಧಿಸಲ್ಪಟ್ಟಿರುವ ರೇವಿನ ಐದು ಮಂದಿಯು ಕೂಡಲೇ ಬಿಡುಗಡೆ ಮಾಡಲ್ಪಡದಿದ್ದರೆ, ಸೋಮವಾರ ದೇಶಾದ್ಯಂತ ಮುಷ್ಕರಕ್ಕೆ — ಬ್ರಿಟ್ ಬಂದ್‌ಗೆ— ಬ್ರಿಡನ್ನಿನ ಮಹಾ ಬಲಯುತವಾದ ಟ್ರೇಡ್ ಯೂನಿಯನ್ ಕಾಂಗ್ರೆಸ್ ಕರೆಕೊಟ್ಟಿದೆ — ಆವರ ಬಿಡುಗಡೆಗಾಗಿ ಬ್ರಿಟಿಷ್ ಸರಕಾರಿ ವಕೀಲರು ರಾಷ್ಟ್ರೀಯ ಕೈಗಾರಿಕಾ ಸಂಬಂಧದ ನ್ಯಾಯಾಸ್ಥಾನಕ್ಕೆ ಮನ್ನೆ ಈ ಕರೆ ಕೊಡಲಾದದ್ದು — ಲಂಡನ್ನಿನಲ್ಲಿ ನಾಲ್ಕೈದು ದಿನಗಳಿಂದ ನಡೆಯುತ್ತಿರುವ ಬೇರೆ ಕಾರ್ಮಿಕರ ಜೊತೆಗೆ ಸಾರಿಗೆ ನೌಕರರು 240000 ನೌಕರರೂ ಸೇ ಬಸ್ ಓಡಾಟ ನಿಂತಿತು — ವಿಮಾನ ನಿಲ್ದಾಣದ ಭೂಮಿಯಲ್ಲಿನ ಕೆಲಸಗಾರರೂ ಸೇರಿ ವಿಮಾನ ಸಂಸ್ಥೆಗಳು ವಿಮಾನ ಹಾರಾಟ ನಿಲ್ಲಿಸಿವೆ— ಲಂಡನ್ ಪತ್ರಿಕೆಗಳಿಲ್ಲವಾಗಿದೆ.

ರೇವಿನ ಕೆಲಸಗಾರರ ಮುಷ್ಕರ

ಲಂಡನ್— ರೇವಿನ ಕೆಲಸಗಾರರಿಗೆ ತಮ್ಮ ಭವಿಷ್ಯ ಬಗ್ಗೆ ಶಂಕೆ ನಿವಾರಣೆಯ ಹೊಸ ಯೋಜನೆಯನ್ನು ತಿರಸ್ಕರಿಸಿ, ರೇವು ಕೆಲಸಗಾರರ ನಾಯಕರು ರಾಷ್ಟ್ರೀಯ ಮುಷ್ಕರಕ್ಕೆ ಕರೆಕೊಟ್ಟಿದ್ದಾರೆ

★

ಮತ್ತೆ ಸತ್ಯಾಗ್ರಹ

ಜಯಪುರ— ಗಾದ್ರಾ ರಸ್ತೆಯಿಂದ ಬರ್ಮರ್ ಭಾಗದಲ್ಲಿ ಅಕ್ರಮಿತ ಪಾಕ್ ಸ್ತಾ ಪ್ರದೇಶಕ್ಕೆ ಪ್ರವೇಶಿಸಲು ನಿನ್ನೆ ಜನ ಸಂಘದ 32 ಮಂದಿ ಕಾರ್ಯಕರ್ತರು ಹೋದಾಗ ಸೈನ್ಯದ ಆಡಳಿತ ಸ್ಥಳಕ್ಕೆ 3 ಮೈಲಿ ದೂರದಲ್ಲೇ ಅವರು ನಿಲ್ಲಿಸಲ್ಪಟ್ಟರು — ಸಂಘದ ಅಧ್ಯಕ್ಷ ಶ್ರೀ ವಾಜಪೇಯಿಯವರು ಬರ್ಮರ್‌ಗೆ ಭೇಟಿಕೊಟ್ಟು, ಗಾದ್ರಾ ರಸ್ತೆಗೆ ವಾಪಸ್ ಬಂದರು.

ಮೈಸೂರು ಕರ್ನಾಟಕ ಆಯಿತು

ಬೆಂಗಳೂರು— 6 ಶತಮಾನಗಳಿಂದ "ಮೈಸೂರು' ಎಂದು ಖ್ಯಾತಿಗೊಂಡಿದ್ದ ಈ ರಾಜ್ಯವು ಇನ್ನು ಕರ್ನಾಟಕ ಎಂಬ ಹೆಸರನ್ನು ಪಡೆಯಿತು — ಈ ಬಗ್ಗೆ ಶಾಸನ ಸಭೆಯಲ್ಲಿ ನಿನ್ನೆ ಅಧಿಕೃತ ಮಸೂದೆ ಮಂಜೂರಾದಾಗ 'ಜೈ ಕರ್ನಾಟಕ' ದ ಹರ್ಷೋದ್ಗಾರ ಸಭೆಯಲ್ಲಿ ತುಂಬಿತು.

ವೈದಿಗಳ ಬಿಡುಗಡೆ

ಬೆಂಗಳೂರು— ಭಾರತ ಸ್ವಾತಂತ್ರ್ಯದ ರಜತ ಮಹೋತ್ಸವದ ಸವಿನೆನಪಿಗಾಗಿ ಕೆಲವು ವರ್ಗದ ವೈದಿಗಳು ಬಿಡಗಡೆ ಮಾಡಲ್ಪಡುವರು.

●

ಸೈಕಲ್ ಸ್ಟ್ಯಾಂಡ್ ಸ್ಥಳ ಬದಲಾವಣೆ

ಮೈಸೂರು— ಆನೇಸಾರಿಸ್ಟೋಟು ಬೀದಿಯಲ್ಲಿರುವ ಸೈಕಲ್ ಸ್ಟ್ಯಾಂಡ್‌ನ್ನು ದೇವರಾಜ ಪೋಲೀಸು ಸ್ಟೇಷನ್ ಪಕ್ಕದಲ್ಲಿ ಧನ್ವಂತರಿ ರಸ್ತೆಯಲ್ಲಿನ ಫುಟ್‌ಪಾತ್‌ನಲ್ಲಿಡುವಂತೆ ಜಿಲ್ಲಾ ಮ್ಯಾಜಿಸ್ಟ್ರೇಟರು ಆಜ್ಞೆ ಮಾಡಿದ್ದಾರೆ.

●

ಹೊಳೇ ಕಾಂಗ್ರೆಸ್ಸಿನಿಂದ ಸ್ವಾಗತ

ಬೆಂಗಳೂರು— ರಾಜ್ಯದ ಹೆಸರು ಕರ್ನಾಟಕ ಎಂಬ ಬದಲಾವಣೆಯನ್ನು ಹೊಳೇ ಕಾಂಗ್ರೆಸ್ಸು ಸ್ವಾಗತಿಸಿದೆ.

○

ದಿವ್ಯವಾಣಿ

ನಿನ್ನ ಶತ್ರುಗಳನ್ನು ಪ್ರೀತಿಸು ; ಯಾಕೆಂದರೆ ಅವರು ನಿನ್ನ ತಪ್ಪುಗಳನ್ನು ತಿಳಿಸುತ್ತಾರೆ — ಬೆಂಜಮಿನ್ ಫ್ರಾಂಕ್ಲಿನ್.

ಕರ್ನಾಟಕದ ಹಿರಿಮೆ

ನೀರಾವರಿಯಲ್ಲಿ ಪ್ರಥಮ ಪ್ರಯತ್ನಿಸಿದ ರಾಜ್ಯ– ಕರ್ನಾಟಕ.

ದೇಶದಲ್ಲಿ ಹೆಚ್ಚು ಕಾಫಿ ಬೆಳೆಯುವ ರಾಜ್ಯ– ಕರ್ನಾಟಕ.

ಸುಧಾರಿಸಿದ ಬೀಜಗಳ ಮಾಲಿಕೆಯ ಪ್ರಥಮ ಪ್ರಶಸ್ತಿಯ ರಾಜ್ಯ– ಕರ್ನಾಟಕ.

ಭಾರತದಲ್ಲಿ 48 6 ರಷ್ಟು ರಾಗಿ ಬೆಳೆಯ ಯಶಸ್ವೀ ರಾಜ್ಯ– ಕರ್ನಾಟಕ.

ಏಲಕ್ಕಿ, ಅಡಕೆ, ಜೋಳ, ತೆಂಗು, ಹತ್ತಿಗಳಲ್ಲಿ ದೇಶದಲ್ಲಿ ಎರಡನೇ ರಾಜ್ಯ– ಕರ್ನಾಟಕ.

ಶೇಂಗಾ ಬೆಳೆಯಲ್ಲಿ ನಾಲ್ಕನೆಯ ಸ್ಥಾನ, ಕಬ್ಬಿನ ಬೆಳೆಯಲ್ಲಿ ಏಳನೆಯ ಪದವಿ, ಮೆಣಸಿನಕಾಯಿ ಮತ್ತು ತಂಬಾಕು ಬೆಳೆಯಲ್ಲಿ ಮೂರನೆಯ ಸ್ಥಾನ ಗಳಿಸಿದೆ– ಕರ್ನಾಟಕ.

ಎರಡು ಕೃಷಿ ವಿಶ್ವವಿದ್ಯಾನಿಲಯ, ಏಳು ಕೃಷಿ ಶಾಲೆ, ಒಂದು ಪಶು ವಿದ್ಯಾಲಯ ವಿರುವ ಮಾದರಿ ನಾಡು– ಕರ್ನಾಟಕ.

ವಾಣಿಜ್ಯ ಬ್ಯಾಂಕುಗಳಲ್ಲಿ ಕೃಷಿಗೆ ಅರ್ಥ ನೆರವು ಆರಂಭಿಸಿದ ಪ್ರಥಮ ರಾಜ್ಯ– ಕರ್ನಾಟಕ.

[ಕೃಷಿ ಸಂಘಟನೆ]

★

ದಿವ್ಯವಾಣಿ

ಪ್ರಾಮಾಣಿಕತೆಯು ಬಾಗಿಲಲ್ಲಿ ನಿಂತು ಬಾಗಿಲನ್ನು ತಟ್ಟುತ್ತದೆ ; ಲಂಚವು ಲಂಚವು ಒಳಗೆ ಪ್ರವೇಶಿಸುತ್ತದೆ. — ವರ್ಡ್ ಬೆರಿಚ್

ವುಡ್‌ಲ್ಯಾಂಡ್ಸ್ 28-7-72ರಿಂದ ಆಮೋಘ 13ನೇವಾರ

.... ಚಿತ್ತಾಕರ್ಷಕ ಕನ್ನಡ ಚಿತ್ರ ....

ಹೃದಯಸಂಗಮ

ನಟಸಾರ್ವಭೌಮ ರಾಜಕುಮಾರ್, ಭಾರತಿ, ಬಾಲಕೃಷ್ಣ, ಅಶ್ವತ್ಥ್, ಪಂಡರಿಬಾಯಿ

ನಿರ್ದೇಶನ : ರಾಜಶ ಸಹೋದರರು ನಿರ್ಮಾಪಕರು : ಎಂ ಜೆ ಎಂ ಸಹೋದರರು

ಪ್ರತಿ ದಿನ 3 ಪ್ರದರ್ಶನಗಳು

ಬೆಳಗಿನ ಪ್ರದರ್ಶನ ಪ್ರತಿ ದಿನ 10-30 ಕಣ್ತೆರದು ನೋಡು

ಅಪೆರಾ 28 7 72 ರಿಂದ

ಫಿಲಂ ಲ್ಯಾಂಡ್‌ರವರ ಮಹೋನ್ನತ ಹಿಂದಿ ಚಿತ್ರ

ಬನ್ ಪೂಲ್

ಪಾತ್ರ : ಜಿತೇಂದ್ರ, ಬಬಿತ

ದಿಗ್ದರ್ಶನ : ವಿಜಯಭಟ್ ಸಂಗೀತ : ಲಕ್ಷ್ಮೀಕಾಂತ್ ಪ್ಯಾರೇಲಾಲ್

ದಿನ- 3 ಪ್ರದರ್ಶನಗಳು

SHAKTI SUDHA

A Superb Tonic

Help The Gorakshana

— Humanitarian Propoganda Monthly ....

' ಮಾನವನು ಕೀಳು ಸೃಷ್ಟಿಯ ಧಣಿ, ಶ್ರೇಷ್ಠನೆನ್ನುವುದು ಸೊಕ್ಕಿನ' ಕಲ್ಪನೆ' ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯಹ ಧರ್ಮಕರ್ತ

— ಮಹಾತ್ಮಾ ಗಾಂಧಿ

ಈದೇಶ ಹೊತ್ತ ಚಿತ್ರ ಸಂದೇಶ್ ರವರ ಜೊಳ್ಳಲು ಚಿತ್ರ

ಅನೆ - ಹುಡುಗ

Quality Printing Neat Binding

Lakshminarasimha Press

Sivarampet, Mysore



Protect the Cow

Edited Printedand Published by Dharmapracharanirata M S Krishna Rao (Propretor) at the Satvavadi Press Chamarajapuram Mysore

For Rugs, Sweaters and Kashmir Coats Visit Bank Road Bahusar